ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೆ, ತಮ್ಮ ಸಲಹೆ ಒಳ್ಳೆಯದಾಗಿದೆ. ಅದರ ಪ್ರಕಾರವೇ ಅವರು ಮಂತ್ರಿಗಳನ್ನು ನೋಡಲಿ.

MR. SPEAKER : I ask the officers to remain with open mind. If officers have transgressed we will advice the Hon. Minister to initiate suitable action against them and we will get to know the position. You kindly get hold of the matters. In the absence of your leader, I will have to depend upon you.

ಶ್ರೀ ವೈ. ರಾಮಕೃಷ್ಣ : ಏನೆಂದರೆ ಎಂಟು ಜನ ವ್ಯವಸಾಯಗಾರರನ್ನು ಒಕ್ಕಲೆಬ್ಬಿಸುವುದೆಂದರೆ ಅಷ್ಟು ಸುಲಭವಲ್ಲ. ಆದ್ದರಿಂದ ಅವರ ಮನಸ್ಸು ಎಜಿಟೇಟ್ ಆಗಿದೆ.

ಡಾ: ಹೆಚ್. ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೇ, ಇವತ್ತು ಆ ಎಂಟು ಜನರು ಬೀದಿಪಾಲಾಗಿದ್ದಾರೆ.

ಅಧ್ಯಕ್ಷರು : ಇದು ವ್ಯವಸಾಯದ ಜಮೀನಿಗಿಂತ ಸೈಟಿನ ಜಮೀನಿನ ತಕರಾರು ಹೆಚ್ಚಿಗೆ ಇದರಲ್ಲಿ ಇದ್ದಂತೆ ಕಾಣುತ್ತದೆ.

ಡಾ: ಹೆಚ್. ಸಿ. ಬಾಲಕೃಷ್ಣ : ಇದು ಸೈಟಿನ ಜಮೀನಲ್ಲ, ವ್ಯವಸಾಯದ ಜಮೀನು.

ಅಧ್ಯಕ್ಷರು : ನಮಗೆ ಒಂದು ಅಂದಾಜು ಇರುತ್ತದೆ, ಅದರ ಆಧಾರದ ಮೇಲೆ ಹೇಳುತ್ತೇವೆ. ತಾವು ಎಲ್ಲ ಮಾಹಿತಿಯನ್ನು ವೈ. ರಾಮಕೃಷ್ಣರವರ ಹತ್ತಿರ ಕೊಡಿ. ನಾನು ಮತ್ತೆ ಕರೆಸಿ ಮಾತನಾಡುತ್ತೇನೆ.

3. : ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) : ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನವನ್ನು ಮೀಸಲಾಗಿಟ್ಟುಕೊಂಡಿರುವುದು.

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಸನ್ಮಾನ್ಯ ಅಧ್ಯಕ್ಷರೆ, ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನವನ್ನು ಮೀಸಲಾಗಿಟ್ಟುಕೊಂಡಿದ್ದರಲ್ಲಿ ನನ್ನ ಕ್ಷೇತ್ರದ ಕೊಟಗಾರ ಪರಿಶಿಷ್ಟ ಜಾತಿಗೆ ಸೇರಿದ ರಾಮ ಎಂಬುವವರು ಅಧ್ಯಕ್ಷರಾಗಿದ್ದಾರೆ. ಕಳೆದ ಐದಾರು ವರ್ಷಗಳಿಂದ ಕಲ್ಲೂರ ಎಂಬುವವರು ಅಲ್ಲಿ ಕಾರ್ಯದರ್ಶಿಯಾಗಿದ್ದರು. ಈ ಅಧ್ಯಕ್ಷರು ಅನಕ್ಷರಸ್ಥರಾಗಿದ್ದುದರಿಂದ ಹೆಸರಿಗೆ ಮಾತ್ರ ಅವರು ಅಧ್ಯಕ್ಷರಾಗಿದ್ದು ಎಲ್ಲಾ ಜವಾಬ್ದಾರಿಗಳನ್ನು ಕಾರ್ಯದರ್ಶಿಗಳೇ ನೋಡಿಕೊಳ್ಳುತ್ತಿದ್ದಾರೆ. ಅವರು ಅವ್ಯವಹಾರ ಮಾಡುತ್ತಿದ್ದಾರೆ ಎಂದು ಸ್ವತಃ ಅಧ್ಯಕ್ಷರು ಜಿಲ್ಲಾಧಿಕಾರಿಗಳಿಗೆ ಕಂಪ್ಲೆಂಟ್ ಕೊಟ್ಟಿದ್ದಾರೆ. ಪಂಚಾಯತ್ ಸಭೆಯಲ್ಲಿ ಏನು ನಿರ್ಣಯವಾಗುತ್ತಿದೆ ಆ ನಿರ್ಣಯವನ್ನು ಅವರು ಜಾರಿಗೊಳಿಸುತ್ತಿಲ್ಲ ಮತ್ತು ಮಿನಿಟ್ ಪುಸ್ತಕದಲ್ಲಿ ಪೂರ್ಣವಾಗಿ ಅದನ್ನು ಬರೆಯುತ್ತಾ ಇಲ್ಲ. ಅಧ್ಯಕ್ಷರಿಗೆ ತಪ್ಪು ಮಾಹಿತಿ ಕೊಟ್ಟು ಅವರಿಗೆ ಬೇಕಾದಂತೆ ಗೊತ್ತು ಗೊತ್ತಿಲ್ಲದ ಎಲ್ಲ ಕಾಗದ ಪತ್ರಗಳಿಗೆ ಅಧ್ಯಕ್ಷರು ಅನಕ್ಷರಸ್ಥರಾಗಿರುವುದರಿಂದ

ಅವರ ಸಹಿಯನ್ನು ಪಹೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಇದರಿಂದಾಗಿ ಅವರಿಗೆ ಸರಿಯಾಗಿ ಕಾರ್ಯನಿರ್ವಹಿಸುವುದಕ್ಕೆ ಬಿಡುತ್ತಿಲ್ಲ ಎಂಬ ವಿಚಾರವನ್ನು ನಾನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಅದೂ ಅಲ್ಲದೆ, ಇದೇ ಅಧ್ಯಕ್ಷರು ಎರಡು ವರ್ಷಕ್ಕೆ ಮುಂಚೆ ಅವರ ಮನೆ ನಂಬರ್ ಪಡೆದುಕೊಳ್ಳುವುದಕ್ಕೆ ಕಾರ್ಯದರ್ಶಿಗಳಿಗೆ ಹಣ ಕೊಟ್ಟು ಪಡೆದುಕೊಳ್ಳಬೇಕಾದ ಪರಿಸ್ಥಿತಿ ಬಂದಿದೆಯಂತೆ. ಈ ತರಹ ಎಲ್ಲಾ ಅವ್ಯವಹಾರಗಳನ್ನು ಕಾರ್ಯದರ್ಶಿಯವರು ಮಾಡುತ್ತಿದ್ದಾರೆ. ನಾನು ಪರಿಶಿಷ್ಟ ಜಾತಿಗೆ ಸೇರಿರುವುದರಿಂದ ಮತ್ತು ಅನಕ್ಷರಸ್ಥನಾಗಿರುವುದರಿಂದ ನನಗೆ ಕಾರ್ಯನಿರ್ವಹಿಸಲಿಕ್ಕೆ ತೊಂದರೆಯಾಗಿದೆ ಎಂಬುದಾಗಿ ಹೇಳಿದ್ದಾರೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಅದಕ್ಕೆ ಸಂಬಂಧಪಟ್ಟ ಕಡತಗಳನ್ನು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಅವರು ಎತ್ತಿರತಕ್ಕ ವಿಚಾರವನ್ನು ಮಾನ್ಯ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳ ಗಮನಕ್ಕೆ ತಂದು ಇದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುತ್ತದೆ.

ಅ) : ಅನುಕಂಪದ ಆಧಾರದ ಮೇಲೆ ಕೆಲಸ ನೀಡುವ ಹೊಸ ನಿಯಮ ಕುರಿತು.

ಶ್ರೀ ಬಿ. ಶಿವರಾಮ್ (ಗಂಡಸಿ) : ಮಾನ್ಯ ಅಧ್ಯಕ್ಷರೆ, ಈಗ ರಾಜ್ಯ ಸರ್ಕಾರವು ಅನುಕಂಪದ ಆಧಾರದ ಮೇಲೆ ಕೆಲಸ ನೀಡುವ ಹೊಸ ನಿಯಮವನ್ನು ಜಾರಿಗೊಳಿಸಿದೆ. ನಂಬರ್ ಡಿ. ಪಿ. ಎ. ಆರ್. 100, ಹೆಚ್. ಸಿ. ಎ. 95 12-9-96 ಇದು ಡಿ. ಪಿ. ಎ. ಆರ್. ಸುತ್ತೋಲೆ, ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಗಮನಿಸಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಹಿಂದೆ ಕೂಡ ನಿಯಮ ಇತ್ತು, ಆದರೆ ಕೆ. ಎ. ಟಿ. ಯಿಂದ 20-10-94 ರಲ್ಲಿ ತೀರ್ಪು ಬಂದು ಅದನ್ನು ವಜಾ ಮಾಡಿದರು. ಆದಾದ ನಂತರ ಉಚ್ಚ ನ್ಯಾಯಾಲಯ 10-7-95 ರಲ್ಲಿ ಅನುಕಂಪದ ನೇಮಕಾತಿಗಾಗಿ ಹೊಸ ನಿಯಮಗಳನ್ನು ಕಾನೂನಿನ ಚೌಕಟ್ಟಿನಲ್ಲಿ ರೂಪಿಸುವಂತೆ ಸರ್ಕಾರಕ್ಕೆ ಒಂದು ಆದೇಶವನ್ನು ಕೊಟ್ಟಿತ್ತು. ಅದರ ಪ್ರಕಾರ ಡಿ. ಪಿ. ಎ. ಆರ್. ಅವರು ರೂಲ್ಸ್ ಫ್ರೇ ಮಾಡಿ ನೋಟಿಫಿಕೇಷನ್ ಇಶ್ಯೂ ಮಾಡಿದ್ದಾರೆ. ಅಬ್ಜೆಕ್ಷನ್ ಕೂಡ ಕಾಲ್ ಮಾಡಿದ್ದರು, ಅಬ್ಜೆಕ್ಷನ್ ಬಂತು. ನಾನೂ ಕೂಡ ಅಬ್ಜೆಕ್ಷನ್ ಹಾಕಿದ್ದೆ. ಆದರೆ ಆದೇಶದಲ್ಲಿ ಯಾವುದನ್ನೂ ಬದಲಾವಣೆ ಮಾಡಿಲ್ಲ. ಅದು ಹೇಗಿತ್ತೋ ಅದರ ಪ್ರಕಾರ ಅನೌನ್ಸ್ ಮಾಡಿದ್ದಾರೆ. ಇದರಲ್ಲಿ ಒಂದು ಸತ್ಯಾನ್ಯತೆ ಎನೆಂದರೆ ಹಿಂದೆ ರೂಲ್ಸ್ ಪ್ರಕಾರ ಅನುಕಂಪದ ಆಧಾರದ ಮೇಲೆ ಕೆಲಸ ಕೊಡುವ ಕಾಲದಲ್ಲಿ ಗಂಡ ಸತ್ತರೆ ಹೆಂಡತಿ, ಹೆಂಡತಿ ಸತ್ತರೆ ಗಂಡ, ಮಕ್ಕಳು ಅಥವಾ ಸೋದರರು ಈ ರೀತಿಯಾಗಿ ಬಹಳ ಇತ್ತು. ಇದರಿಂದ ತೊಡಕು ಹೆಚ್ಚಾಗುತ್ತಿತ್ತು. ಈಗ ಹೊಸ ಆದೇಶದಲ್ಲಿ ಏನು ಮಾಡಿದ್ದಾರೆ ಎಂದರೆ, ಗಂಡ ಸತ್ತರೆ ಹೆಂಡತಿ, ಹೆಂಡತಿ ಸತ್ತರೆ ಮಗ ಅಥವಾ ಅವಿವಾಹಿತ ಮಹಿಳೆ ಎಂದು ಮಾಡಿದ್ದಾರೆ. ಇದು ಒಪ್ಪತಕ್ಕ ವಿಚಾರ. ಆದರೆ ಹಿಂದಿನ ನಿಯಮದಲ್ಲಿ ಏನು ಇತ್ತು ಎಂದರೆ 5 ವರ್ಷದವರೆಗೆ ಅರ್ಜಿಯನ್ನು ಹಾಕುವುದಕ್ಕೆ ಒಂದು ಅವಕಾಶವನ್ನು ನಿಯಮಾವಳಿಯಲ್ಲಿ ಕಲ್ಪಿಸಿತ್ತು. ಈಗಿನ ಆದೇಶದಲ್ಲಿ ಡಿ. ಪಿ. ಎ. ಆರ್. ರೂಲ್ಸ್ ಪ್ರಕಾರ ಏನು ಮಾಡಿದ್ದಾರೆ ಎಂದರೆ ಒಂದು ವರ್ಷ